## ಪೌರ ಸಮಸ್ಯೆಗೆ ವಿದ್ಯಾರ್ಥಿಗಳಿಂದ ಆವಿಷ್ಕಾರೀ ಪರಿಹಾರ

# ಜಿಲ್ಲಾಡಳಿತ, ಎನ್‌ಐಟಿಕೆ ಸುರತ್ಕಲ್ ಒಪ್ಪಂದ

**ಮಂಗಳೂರು, ಮೇ.9:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನೂ ಆಡಳಿತ ವ್ಯವಸ್ಥೆ ಸುಧಾರಣೆಯ ಭಾಗವಾಗಿಸುವ ಹೆಜ್ಜೆಯಾಗಿ ಸುರತ್ಕಲ್‌ನ ಎನ್‌ಐಟಿಕೆ ಹಾಗೂ ದ.ಕ ಜಿಲ್ಲಾಡಳಿತ ಒಪ್ಪಂದಕ್ಕೆ ಸಹಿ ಹಾಕಿವೆ.

ಜಿಲ್ಲಾಧಿಕಾರಿ ಮುಲ್ಲೈಮುಗಿಲನ್ ಹಾಗೂ ಎನ್‌ಐಟಿಕೆಯ ನಿರ್ದೇಶಕ ಪ್ರೊ|ಬಿ. ರವಿ ಅವರು ಮಂಗಳವಾರ ಈ ದ್ವೈವಾರ್ಷಿಕ ಮಾದರಿಯ ಒಪ್ಪಂದ ಮಾಡಿಕೊಂಡರು.

ಶಿಕ್ಷಣ ಸಂಸ್ಥೆಗಳನ್ನು ಆಡಳಿತ ಸುಧಾರಣೆಯಲ್ಲಿ ಬಳಸಿಕೊಳ್ಳುವ ಮೊದಲ ಹೆಜ್ಜೆಯಾಗಿ ಎನ್‌ಐಟಿಕೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಮೂಲಕ ಮಂಗಳೂರು ನಗರವಲ್ಲದೇ ಜಿಲ್ಲೆಯಲ್ಲಿನ ಪೌರ ಸಮಸ್ಯೆಗಳಿಗೆ ಸ್ಪಂದಿಸಲು, ಪರಿಹಾರಗಳನ್ನು ವಿದ್ಯಾರ್ಥಿಗಳ ಸಹಭಾಗಿತ್ವದೊಂದಿಗೆ ಅಭಿವೃದ್ಧಿ ಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ನಗರದ ಸಂಚಾರಿ ಸಮಸ್ಯೆಗಳು, ಘನ ತ್ಯಾಜ್ಯ ವಿಲೇವಾರಿ, ಏಕಬಳಕೆ ಪ್ಲಾಸ್ಟಿಕ್ ನಿಷೇಧ ಇತ್ಯಾದಿ ಕೆಲವು ಕ್ಷೇತ್ರಗಳನ್ನು ಮೊದಲಿಗೆ ಗುರುತಿಸಲಾಗಿದೆ. ವಿದ್ಯಾರ್ಥಿಗಳಿಗೆ ತಜ್ಞರು, ಪ್ರೊಫೆಸರ್‌ಗಳು ಮಾರ್ಗದರ್ಶನ ನೀಡುವರು. ಮಂಗಳೂರು ಮಹಾನಗರಪಾಲಿಕೆ, ಇಂಟಿಗ್ರೇಟೆಡ್ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರಗಳ ಜೊತೆ ಹೊಂದಾಣಿಕೆಯೊಂದಿಗೆ ಕೆಲಸ ಮಾಡಲಾಗುವುದು ಎಂದರು.

ಮುಂದೆ ಇಂತಹ ಹಲವು ಶಿಕ್ಷಣ ಸಂಸ್ಥೆಗಳನ್ನು ಒಟ್ಟು ಸೇರಿಸುವ ಡಿಜಿಟಲ್ ಪ್ಲಾಟ್‌ಫಾರಂ ಅನ್ನು ಅಭಿವೃದ್ಧಿ ಪಡಿಸಲಾಗುವುದು. ಕೇವಲ ತಾಂತ್ರಿಕ ವಿದ್ಯಾರ್ಥಿಗಳಲ್ಲದೆ ಇತರ ಕ್ಷೇತ್ರದವರನ್ನೂ ಸೇರಿಸಲಾಗುವುದು. ಮಾಹಿತಿ ತಂತ್ರಜ್ಞಾನ ಆಧರಿತ ಪರಿಹಾರ ಕ್ರಮಗಳಲ್ಲದೆ ಸಿವಿಲ್ ಎಂಜಿನಿಯರಿಂಗ್ ಅಥವಾ ಎಂಬಿಎ ಸಂಬಂಧಿತ ವಿದ್ಯಾರ್ಥಿಗಳೂ ಪರಿಹಾರವನ್ನು ಒದಗಿಸಬಹುದು. ಇದರಲ್ಲಿ ಜಿಲ್ಲಾಡಳಿತಕ್ಕೆ ಪೌರ ಸಮಸ್ಯೆಗಳಿಗೆ ಪರಿಹಾರ ಸಿಕ್ಕರೆ, ವಿದ್ಯಾರ್ಥಿಗಳಿಗೂ ಪ್ರಾಯೋಗಿಕವಾಗಿ ಸಮಾಜಮುಖೀ ಪರಿಹಾರ ಒದಗಿಸುವ ಮೂಲಕ ಸಾಮಾಜಿಕ ಉದ್ಯಮಿಗಳಾಗುವ, ನವೋದ್ಯಮ ಸ್ಥಾಪಿಸುವ ಅವಕಾಶವೂ ತೆರೆದುಕೊಳ್ಳುತ್ತದೆ ಎಂದರು. ಈ ಪ್ಲಾಟ್‌ಫಾರಂನಲ್ಲಿ ಆಸಕ್ತ ಸಂಸ್ಥೆಗಳು ಸೇರಿಕೊಳ್ಳುವ ಅವಕಾಶ ಇರಲಿದೆ.

ಈ ಸಹಭಾಗಿತ್ವವು ಸಂಶೋಧನೆ ಮತ್ತು ಆವಿಷ್ಕಾರ ಮೂಲಕ ಮಂಗಳೂರಿಗೆ ಪ್ರಯೋಜನ ತರಲಿದೆ. ಜಿಲ್ಲಾಡಳಿತದ ಈ ಯೋಜನೆ ಮೂಲಕ ಮಹಾನಗರಪಾಲಿಕೆ ಸಹಯೋಗದೊಂದಿಗೆ ನಗರ ಸಮಸ್ಯೆಗಳಿಗೆ ಪರಿಣಾಮಕಾರಿ ಪರಿಹಾರಗಳನ್ನು ಕಂಡುಕೊಳ್ಳಲಾಗುವುದು. ಇದಕ್ಕಾಗಿ ಹ್ಯಾಕಥಾನ್‌ನಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಪ್ರೊ|ರವಿ ಹೇಳಿದರು. ಜಿಲ್ಲಾ ಪಂಚಾಯತ್ ಸಿಇಒ ಡಾ| ಆನಂದ್, ಮಂಗಳೂರು ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್, ಮಂಗಳೂರು ಸ್ಮಾರ್ಟ್ ಸಿಟಿ ಎಂ.ಡಿ ರಾಜು, ಎನ್‌ಐಟಿಕೆ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಎನ್‌ಐಟಿಕೆ ಹಾಗೂ ದ.ಕ ಜಿಲ್ಲಾಡಳಿತ ನಡುವೆ ಒಪ್ಪಂದ ಮಾಡಿಕೊಳ್ಳಲಾಯಿತು

### ಹಂತ ಹಂತವಾಗಿ ಸ್ಥಳಾಂತರ

ಜಿಲ್ಲಾಧಿಕಾರಿ ಕಚೇರಿಯನ್ನು ಪಡೀಲಿನ ಹೊಸ ಜಿಲ್ಲಾಧಿಕಾರಿ ಕಚೇರಿ ಕಟ್ಟಡಕ್ಕೆ ಸ್ಥಳಾಂತರಿಸುವ ಕೆಲಸ ಕೆಲ ದಿನಗಳಲ್ಲಿ ಶುರುವಾಗಲಿದ್ದು, ಹಂತ ಹಂತವಾಗಿ ಪೂರ್ಣಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು. ಮುಖ್ಯಮಂತ್ರಿಯವರಿಂದ ಹೊಸ ಕಟ್ಟಡ ಉದ್ಘಾಟನೆ ದಿನಾಂಕ ಅಂತಿಮಗೊಳ್ಳಬೇಕಿದೆ. ಈಗಿರುವ ಕಚೇರಿಯಿಂದ ಎಲ್ಲಾ ಇಲಾಖಾ ಕಚೇರಿಗಳೂ ಸ್ಥಳಾಂತರಗೊಳ್ಳಲಿವೆ. ಅಲ್ಲದೆ ನಾಲ್ಕೈದು ಇತರ ಇಲಾಖೆಗಳ ಕಚೇರಿಗಳೂ ಬರಲಿವೆ ಎಂದರು.

Udayavani, Date: 10/05/25, p, no - 02_ sudina